# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 01 ಜಿಪಅ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 1ನೇ ಫೆಬ್ರವರಿ 2014

## ಸುತ್ತೋಲೆ

ವಿಷಯ: ಜಿಲ್ಲಾ ಪಂಚಾಯತ್ ಮತ್ತು ಅವುಗಳ ವ್ಯಾಪ್ತಿಯಲ್ಲಿ ವೇತನ ವೆಚ್ಚಕ್ಕಾಗಿ ಯೋಜನೇತರ ಲೆಕ್ಕ ಶೀರ್ಷಿಕೆ 2515 (ಒಟ್ಟಾರೆ) (lumpsum) ಅಡಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

******

ಜಿಲ್ಲಾ ಪಂಚಾಯತ್‌ನಲ್ಲಿ ಬಜೆಟ್ ಕಂಟ್ರೋಲ್ ಇರುವುದರಿಂದ ಜಿಲ್ಲಾ ಪಂಚಾಯತ್‌ಗಳ ಮತ್ತು ವ್ಯಾಪ್ತಿಯ ಇತರೆ ಇಲಾಖೆಗಳ ಕಾರ್ಯಕ್ರಮಗಳಡಿ 2013-14ನೇ ಸಾಲಿನಲ್ಲಿ ವೇತನ ವೆಚ್ಚಕ್ಕಾಗಿ ಅವಶ್ಯವಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-196-1-05-300 (ಒಟ್ಟಾರೆ)(lumpsum)(ಯೋಜನೇತರ)(ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶಿರ್ಷಿಕೆ 2515-00-101-0-26 (ಯೋಜನೇತರ) ಅಡಿ ಒದಗಿಸಿರುವ ಅನುದಾನದಿಂದ ಆರ್ಥಿಕ ಇಲಾಖೆ ಬಿಡುಗಡೆಗೊಳಿಸುತ್ತದೆ. ಈ ರೀತಿ ಒಟ್ಟಾರೆಯಡಿ ಬಿಡುಗಡೆಗೊಳಿಸುವ ಅನುದಾನವನ್ನು ಜಿಲ್ಲಾ ಪಂಚಾಯತ್‌ನ ನಿಧಿ-2ಕ್ಕೆ ಸ್ವೀಕರಿಸಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಮರು ಹೊಂದಾಣಿಕೆ ಆದೇಶವನ್ನು ಕೂಡಲೇ ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬಸವೇಶ್ವರ ರಸ್ತೆ, ಬೆಂಗಳೂರು ಇವರಿಗೆ ಸಲ್ಲಿಸಿ ಅವಶ್ಯವಿರುವ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಭರಿಸಲು ಅನುವು ಮಾಡತಕ್ಕದ್ದು.

ಜಿಲ್ಲಾ ಪಂಚಾಯತ್‌ಗಳಿಂದ ಸ್ವೀಕೃತವಾಗುವ ಮರು ಹೊಂದಾಣಿಕೆ ಆದೇಶಗಳನ್ವಯ ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಬೆಂಗಳೂರು ಇವರು ಅಗತ್ಯವಿರುವ ಲೆಕ್ಕ ಶೀರ್ಷಿಕೆಗಳ ಕಾರ್ಯಕ್ರಮಗಳ ವೇತನ ವೆಚ್ಚಗಳಿಗಾಗಿ ಗಣಕಯಂತ್ರದಲ್ಲಿ ಆಯವ್ಯಯದ ಅಂಕಿ ಅಂಶಗಳನ್ನು ಪರಿಷ್ಕರಿಸಿ ವೇತನ ಬಿಲ್ಲುಗಳನ್ನು ನಿಯಮಾನುಸಾರ ತೀರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ಖಜಾನಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

(ಎಸ್.ಜಿ.ಜಗನ್ನಾಥ್)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು
6. ಹೆಚ್ಚುವರಿ ಪ್ರತಿ
7. ಸುತ್ತೋಲೆ ಕಡತಕ್ಕೆ